ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 27-06-2018

ಮೀನು ನೀಡುವ ಬದಲಾಗಿ ಮೀನು ಹಿಡಿಯುವ ಕಲೆಯನ್ನು ಕಲಿಸಬೇಕು – ಪ್ರೊ. ಉಮೇಶ

**ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಉದ್ಯಮ ಶೀಲತಾ ಜಾಗೃತಿ ಶಿಬಿರ**

ಕೊಳ್ಳೇಗಾಲ : 27-06-2018 : ವ್ಯಕ್ತಿಯೊಬ್ಬನಿಗೆ ಮೀನು ಕೊಡುವ ಬದಲಾಗಿ ಮೀನು ಹಿಡಿಯುವ ಕಲೆಯನ್ನು ಕಲಿಸಿದರೆ ಆತ ಎಂದಿಗೂ ಹಸಿವಿನಿಂದ ಬಳಲುವಂತಿಲ್ಲ ಎಂದು ಪ್ರಾಚಾರ್ಯ ಪ್ರೊ ಉಮೇಶ, ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲರವರು ತಿಳಿಸಿದರು.

ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ರುಡ್‌ಸೆಟ್ ಸಂಸ್ಥೆ, ಮರಿಯಾಲ ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಆಶ್ರಯದಲ್ಲಿ ಆಯೋಜಿಸಿದ್ದ ಉದ್ಯಮ ಶೀಲತಾ ಜಾಗೃತಿ ಶಿಬಿರವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಹಾಗೂ ನಗರದ ಕೆಳ ಮಧ್ಯಮ ವರ್ಗದ ಜನರಿಗೆ ಭದ್ರ ನೆಲೆ ಹಾಗೂ ಆಸ್ತಿ ಪಾಸ್ತಿ ಇದರ ಕಾರಣ ಸಾಲ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಖಾಸಗಿ ಬಡ್ಡಿ ವ್ಯವಹಾರ ನಡೆಸುವವರನ್ನೇ ಸಾಲಕ್ಕಾಗಿ ಅವಲಂಬಿಸಬೇಕಾದ ಕಾರಣ ಶೋಷಣೆಗೊಳಗಾಗುತ್ತಾರೆ. ಇಂತಹ ವರ್ಗದವರನ್ನು ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ತರಲು ಹಾಗೂ ಸಾಲ ಸೌಲಭ್ಯಗಳ ವ್ಯವಸ್ಥೆಗಳು ಇವರಿಗೂ ತಲುಪುವಂತಾಗಲು ಇಂತಹ ಕಾರ್ಯಕ್ರಮಗಳು ನಿಜಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿ ನೀಡಿದ ಶ್ರೀಯುತ ರಾಜೆಂದ್ರ ಪ್ರಸಾದ್, ಉಪನಿರ್ದೇಶಕರು, ಕೆ.ವಿ.ಐ.ಸಿ, ಚಾಮರಾಜನಗರ ರವರು ಯುವರಂಗದ ಕ್ರಿಯಾಶೀಲತೆ ಹಾಗೂ ಸೃಜನ ಶೀಲತೆಯನ್ನು ದೇಶದ ಅರ್ಥ ವ್ಯವಸ್ಥೆಗೆ ಹೊಸ ಚೈತನ್ಯ ತುಂಬುವ ನಿಟ್ಟಿನಲ್ಲಿ ಸದ್ವಿನಿಯೋಗ ಪಡಿಸಿಕೊಳ್ಳಬೇಕಾದಲ್ಲಿ ಇಂತಹ ಯೋಜನೆಗಳು ಪೂರಕವಾಗಿ ನಿಲ್ಲುತ್ತಿವೆ ಎಂದು ಅಭಿಪ್ರಾಯಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಎಂ.ಎನ್ ಮುರುಳೇಶ್, ಜಂಟಿ ನಿರ್ದೇಶಕರು, ಡಿ.ಐ.ಸಿ, ಚಾಮರಾಜನಗರ ರವರು ಈ ಹಿಂದೆ ಪದವಿ ನಂತರ ಕೆಲಸ ಹುಡುಕಿಕೊಂಡು ಹೋಗುತ್ತಿದ್ದುದೇ ಯುವಕರ ಮೂಲ ಮಂತ್ರವಾಗಿತ್ತು. ಆದರೆ ಪ್ರಸ್ತುತ ಶಿಕ್ಷಿತ ಹಾಗೂ ಕೌಶಲ್ಯಭರಿತ ಯುವ ಜನಾಂಗವು ತಾನೇ ಉದ್ಯೋಗ ಸೃಷ್ಠಿಗೆ ಮುಂದಾಗುತ್ತಿದೆ. ಭಾರತದಲ್ಲಿ ಉದ್ಯಮ ಸ್ಥಾಪನೆಗೆ ವಿಫುಲ ಅವಕಾಶಗಳಿದ್ದು ಯುವ ವರ್ಗವು ಅತ್ಮ ವಿಶ್ವಾಸದಿಂದ ಉದ್ಯಮಿಗಳಾಗಿ ಬೆಳೆಯಬೇಕಿದೆ. ಐಐಟಿ, ಐಐಎಂ ಓದಿದ ವಿದ್ಯಾರ್ಥಿಗಳ ಪೈಕಿ ಸಾಕಷ್ಟು ಜನ ಸಂಬಳ ತರುವ ಕೆಲಸ ಬಯಸದೆ ತಮ್ಮದೇ ಸ್ಮಾರ್ಟ್ ಆಪ್‌ಗಳನ್ನು ಪ್ರಾರಂಭಿಸಿ ಯಶಸ್ಸು ಕಂಡಿರುವುದನ್ನು ನಾವು ಗಮನಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಮಧು, ಜಂಟಿ ನಿರ್ದೇಶಕರು, ಸಿಡಾಕ್, ಚಾಮರಾಜನಗರ, ಶ್ರೀ ರಾಜ್‌ಕುಮಾರ್, ಜಿಲ್ಲಾಧಿಕಾರಿಗಳು, ಕೆ.ವಿ.ಐ.ಬಿ. ಚಾಮರಾಜನಗರ, ಶ್ರೀ ವೆಂಕಟೇಶ್ ವೈ ಕೆ., ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾಕರಿಕಾ ಕೇಂದ್ರ, ಚಾಮರಾಜನಗರರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ೨೦೦ಕ್ಕೂ ಹೆಚ್ಚು ನಿರುದ್ಯೋಗ ಜನರು ಭಾಗವಹಿಸಿದ್ದರು.

ಶ್ರೀ ಬಿ.ಎಂ ಚಂದ್ರಶೇಖರ್ ಸ್ವಾಗತಿಸಿ, ಶ್ರೀ ಬಿ.ಕೆ. ಚಂದ್ರಶೇಖರ್ ವಂದಿಸಿದರು. ಶ್ರೀ ಬಿ. ಚಿನ್ನಸ್ವಾಮಿ, ಸಂಯೋಜಕರು, ರುಡ್‌ಸೆಟ್ ಕಾರ್ಯಕ್ರಮ ನಿರೂಪಿಸಿದರು. ನಂತರ ಅಧಿವೇಶನಗಳಲ್ಲಿ ಸ್ವಂತ ಉದ್ಯಮಗಳನ್ನು ಸ್ಥಾಪಿಸುವುದರ ಬಗೆಗೆ ಸಾಕಷ್ಟು ಮಾಹಿತಿ ನೀಡಿದರು.

ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆ ಮರಿಯಾಲ ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ ಇವರ ಆಶ್ರಯದಲ್ಲಿ ಆಯೋಜಿಸಿದ್ದ ಉದ್ಯಮ ಶಿಲತಾ ಜಾಗೃತಿ ಶಿಬಿರವನ್ನು ಪ್ರಾಚಾರ್ಯ ಪ್ರೊ. ಉಮೇಶ್ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಬಿ. ಚಿನ್ನಸ್ವಾಮಿ, ಶ್ರೀ ಮಧು, ಶ್ರೀ ರಾಜ್‌ಕುಮಾರ್, ಶ್ರೀ ವೆಂಕಟೇಶ್ ವೈ ಕೆ. ಹಾಗೂ ಶ್ರೀ ಕೆ ಚಂದ್ರಶೇಖರ್, ಶ್ರೀ ಪಿ ಮಹೇಶ್, ಪಬ್ಲಕ್ ಟಿ.ವಿ. ವರದಿಗಾರರು, ಶ್ರೀ ಬಿ.ಕೆ ಚಂದ್ರಶೇಖರ್ ರವರನ್ನು ಕಾಣಬಹುದು.



ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆ ಮರಿಯಾಲ ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ ಇವರ ಆಶ್ರಯದಲ್ಲಿ ಆಯೋಜಿಸಿದ್ದ ಉದ್ಯಮ ಶೀಲತಾ ಜಾಗೃತಿ ಶಿಬಿರ ವೇದಿಕೆಯಲ್ಲಿ ಶ್ರೀ ಬಿ. ಚಿನ್ನಸ್ವಾಮಿ, ಪ್ರಾಚಾರ್ಯ ಪೊ. ಉಮೇಶ್, ಶ್ರೀ ಮಧು, ಶ್ರೀ ರಾಜ್‌ಕುಮಾರ್, ಶ್ರೀ ವೆಂಕಟೇಶ್ ವೈ ಕೆ., ಶ್ರೀ ಬಿ. ಕೆ ಚಂದ್ರಶೇಖರ್, ಶ್ರೀ ಪಿ ಮಹೇಶ್, ಪಬ್ಲಕ್ ಟಿ.ವಿ. ವರದಿಗಾರರು, ಶ್ರೀ ಕೆ ಚಂದ್ರಶೇಖರ್ ರವರನ್ನು ಕಾಣಬಹುದು.



ಜೆಎಸ್ಎಸ್ ರುಡ್‌ಸೆಟ್ ಸಂಸ್ಥೆ ಮರಿಯಾಲ ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ ಇವರ ಆಶ್ರಯದಲ್ಲಿ ಆಯೋಜಿಸಿದ್ದ ಉದ್ಯಮ ಶಿಲತಾ ಜಾಗೃತಿ ಶಿಬಿರದಲ್ಲಿ ಪ್ರಾಚಾರ್ಯ ಪ್ರೊ ಉಮೇಶ್‌ರವರು ಮಾತನಾಡು ತ್ತಿರುವುದು. ಚಿತ್ರದಲ್ಲಿ ಶ್ರೀ ಮಧು, ಶ್ರೀ ರಾಜ್‌ಕುಮಾರ್, ಶ್ರೀ ವೆಂಕಟೇಶ್ ವೈ ಕೆ., ಶ್ರೀ ಬಿ. ಕೆ ಚಂದ್ರಶೇಖರ್,
ಶ್ರೀ ಕೆ ಚಂದ್ರಶೇಖರ್ ರವರನ್ನು ಕಾಣಬಹುದು.




## ಜಾಗೃತಿ ಶಿಬಿರದಲ್ಲಿ ಭಾಗವಹಿಸಿದರುವ ನಿರುದ್ಯೋಗಸ್ಥರು

